# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **991** |
| ಸದಸ್ಯರ ಹೆಸರು | : | ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 15-12-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ನವಿಲು ತೀರ್ಥ ಅಣೆಕಟ್ಟು (ಮಲಪ್ರಭಾ ಅಣೆಕಟ್ಟು/ರೇಣುಕಾ ಸಾಗರ ಜಲಾಶಯ) ಬಳಿ, ಅಣೆಕಟ್ಟಿನಿಂದ ಹರಿದುಹೋಗುವ ನೀರನ್ನು ಬಳಸಿ ಹೈಡ್ರೋ ಪಂಪ್ಡ್ (Pumped Storage) ತಂತ್ರಜ್ಞಾನದ ಮೂಲಕ ವಿದ್ಯುತ್ ಉತ್ಪಾದಿಸುವ ಯಾವುದೇ ಯೋಜನೆ ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿ/ ಕಾರ್ಯಗತಗೊಳಿಸು ವಿಕೆಯಲ್ಲಿದೆಯೇ: | ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ನವಿಲು ತೀರ್ಥ ಅಣೆಕಟ್ಟು ಬಳಿ ನಿರ್ಮಾಣವಾಗುತ್ತಿರುವ PHSP ಯೋಜನೆಯು M/s. Greenko KA01 IREP Pvt. Ltd. ರವರ ಖಾಸಗಿ ಹೂಡಿಕೆಯ ಯೋಜನೆಯಾಗಿದೆ.<br>ಕರ್ನಾಟಕ ಸರ್ಕಾರವು 2021-22 ರ ಬಜೆಟ್‌ನಲ್ಲಿ 1000 MW ಪಂಪ್ಡ್ ಹೈಡ್ರೋ ಸ್ಟೋರೇಜ್ ಪ್ಲಾಂಟ್ ಯೋಜನೆ (PHSP) ಯನ್ನು ಖಾಸಗಿ ಹೂಡಿಕೆ ಆಧಾರದಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದು ಘೋಷಿಸಿದೆ.<br>ರಾಜ್ಯ ಸಚಿವ ಸಂಪುಟವು ಪಿ.ಸಿ.ಕೆ.ಎಲ್. ಸಂಸ್ಥೆಗೆ Electricity Act, 2003 ರ ಸೆಕ್ಷನ್ 63 ರಡಿಯಲ್ಲಿ ಸ್ಪರ್ಧಾತ್ಮಕ ಇ-ಹರಾಜು (e-Reverse Auction) ಪ್ರಕ್ರಿಯೆ ಮೂಲಕ PHSP ಟೆಂಡರ್ ಕರೆಯಲು ಅನುಮೋದಿಸಿರುತ್ತದೆ (ಸರ್ಕಾರದ ಆದೇಶ ಪ್ರತಿಯನ್ನು ಲಗತ್ತಿಸಲಾಗಿದೆ).<br>ಮುಂದುವರೆದು, 1000 MW PHSP ಟೆಂಡರ್ ಪ್ರಕ್ರಿಯೆಯಲ್ಲಿ 300 MW ಸಾಮರ್ಥ್ಯವನ್ನು M/s. JSW Neo Energy Ltd. ರವರಿಗೆ ಮತ್ತು 700 MW ಸಾಮರ್ಥ್ಯವನ್ನು M/s. Greenko KA01 IREP Pvt. Ltd. ರವರಿಗೆ ಹಂಚಿಕೆ ಮಾಡಲಾಯಿತು.<br>ಕರ್ನಾಟಕ ಸರ್ಕಾರವು M/s. Greenko KA01 IREP Pvt. Ltd. ರವರ 700 MW ಸಾಮರ್ಥ್ಯದ PHSP ಯೋಜನೆಗೆ ನವಿಲು ತೀರ್ಥ ಅಣೆಕಟ್ಟು ಜಲಾಶಯದಿಂದ ಒಂದು ಟಿಎಂಸಿ ನೀರನ್ನು ಒಂದು ಭಾರಿ ಭರ್ತಿ (one time filling) ಮಾಡಿ ಬಳಸಿಕೊಳ್ಳಲು ಅನುಮೋದಿಸಿದೆ. ಪ್ರಸ್ತುತ 700 MW PHSP ಯೋಜನೆಯು ಬೆಳಗಾವಿ ಜಿಲ್ಲೆಯ ಸವದತ್ತಿಯ ನವಿಲು ತೀರ್ಥ ಅಣೆಕಟ್ಟು ಬಳಿ ನಿರ್ಮಾಣ ಹಂತದಲ್ಲಿದೆ. |
| ಆ) | ಹಾಗಿದ್ದಲ್ಲಿ, ಸದರಿ ಯೋಜನೆಯನ್ನು ಸರ್ಕಾರವೇ ನಿರ್ವಹಿಸುತ್ತಿದೆಯೇ: ಅಥವಾ ಯಾವುದಾದರು ಕಂಪನಿಗೆ ವಹಿಸಲಾಗಿದೆಯೇ; ಕಂಪನಿಗೆ ವಹಿಸಲಾಗಿದ್ದಲ್ಲಿ, ಆ ಕಂಪನಿಯು ಯಾವ ದೇಶಕ್ಕೆ ಸೇರಿದೆ: | ಸದರಿ ಯೋಜನೆಯನ್ನು ಸರ್ಕಾರವು ನಿರ್ವಹಿಸುತ್ತಿರುವುದಿಲ್ಲ. ಆದರೆ, ಪಿ.ಸಿ.ಕೆ.ಎಲ್. ಸಂಸ್ಥೆಯು ಖಾಸಗಿ ಹೂಡಿಕೆ ಆಧಾರದ ಮೇರೆಗೆ M/s. Greenko KA01 IREP Pvt. Ltd. ರವರಿಗೆ 700 MW PSP ಯೋಜನೆಯನ್ನು ವಹಿಸಿದೆ ಹಾಗೂ ಈ ಕಂಪನಿಯು ಭಾರತ ದೇಶದಲ್ಲಿ ನೋಂದಣಿಯಾಗಿರುತ್ತದೆ. |
| ಇ) | ಸದರಿ ಯೋಜನೆಯಲ್ಲಿ ಹೂಡಿಕೆ ಮಾಡಲಾಗುವ ಒಟ್ಟು ಬಂಡವಾಳದ ಮೊತ್ತವೆಷ್ಟು: ಮತ್ತು ಇದರಿಂದ ಒಟ್ಟು ಎಷ್ಟು ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ನಿರೀಕ್ಷಿಸಲಾಗಿದೆ. | M/s. Greenko KA01 IREP Pvt. Ltd. ರವರು ಒಟ್ಟು 1600 MW PHSP ವಿದ್ಯುತ್ ಉತ್ಪಾದನೆಯ ಸಾಮರ್ಥ್ಯ ಹೊಂದಿದ್ದು, ಒಟ್ಟು ಬಂಡವಾಳದ ಅಂದಾಜು ಮೊತ್ತ ರೂ.11,015.98 ಕೋಟಿಗಳಾಗಿರುತ್ತದೆ ಎಂದು ತಿಳಿಸಿರುತ್ತಾರೆ ಮತ್ತು ಒಟ್ಟು 1600 MW ವಿದ್ಯುತ್ ಉತ್ಪಾದನೆಯ ಸಾಮರ್ಥ್ಯದಲ್ಲಿ ಕರ್ನಾಟಕ ರಾಜ್ಯಕ್ಕೆ 700 MW PHSP ಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. |
| ಈ) | ಈ ಯೋಜನೆಯಿಂದ ನೇರವಾಗಿ ಮತ್ತು ಪರೋಕ್ಷವಾಗಿ ಒಟ್ಟು ಎಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ ಎಂಬುದರ ವಿವರ ನೀಡುವುದು? | ಈ ಯೋಜನೆಯಿಂದ ನೇರವಾಗಿ / ಪರೋಕ್ಷವಾಗಿ ಸುಮಾರು 500 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆ ಇರಬಹುದು ಎಂದು M/s. Greenko KA01 IREP Pvt. Ltd. ರವರು ತಿಳಿಸಿರುತ್ತಾರೆ. |

ಸಂಖ್ಯೆ: ಎನರ್ಜಿ 298 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು